International Journal of Kannada Research 2019; 5(1): 228-232

International Journal of Kannada Research
www.kannadajournal.com

ISSN: 2454–5813
IJKR 2019; 5(1): 228-232
© 2019 IJKR
www.kannadajournal.com
Received: 19-11-2018
Accepted: 23-12-2018

**ಪ್ರೊ. ಮಂಜುನಾಥ ಎಂ.ಪಾಟೀಲ**
ಸಹಾಯಕ ಪ್ರಾಧ್ಯಾಪಕರು,
ಜಿ.ಸಿ.ಕಾಲೇಜು ಅಂಕೋಲ

**Correspondence**
**ಪ್ರೊ. ಮಂಜುನಾಥ ಎಂ.ಪಾಟೀಲ**
ಸಹಾಯಕ ಪ್ರಾಧ್ಯಾಪಕರು,
ಜಿ.ಸಿ.ಕಾಲೇಜು ಅಂಕೋಲ

# ಅಂಕೋಲದ ಕರಬಂಧಿ ಹೋರಾಟದಲ್ಲಿ ನಾಡವರ ಹಳ್ಳಿಗಳ ಪಾತ್ರ

**ಪ್ರೊ. ಮಂಜುನಾಥ ಎಂ.ಪಾಟೀಲ**

ಸ್ವಾತಂತ್ರ್ಯ ಸಮರದ ಚರಿತ್ರೆಯಲ್ಲಿ ಕರ್ನಾಟಕ ರಾಜ್ಯದ ಉತ್ತರಕನ್ನಡ ಜಿಲ್ಲೆಯ ಅಂಕೋಲ ತಾಲೂಕಿಗೆ ವಿಶಿಷ್ಟ ಸ್ಥಾನವಿದೆ. ಅಂಕೋಲ ಹಲವು ಜನಾಂಗಗಳ ನೆಲವೀಡು. ಇಲ್ಲಿ ನಾಡವರು, ಹಾಲಕ್ಕಿಒಕ್ಕಲಿಗರು,ನಾಮಧಾರಿಗಳು,ಕೋಮಾರಪಂತರು,ಕೊಂಕಣಿಗರು,ವೈಶ್ಯರು & ಆಗೇರರು ಮುಂತಾದ ಜನಾಂಗದವರು ತಮ್ಮ ಬದುಕು ಕಟ್ಟಿಕೊಂಡಿರುತ್ತಾರೆ. ಈ ಭಾಗದಲ್ಲಿ ಕ್ರಿ.ಶ 1930 –1942 ರವರೆಗೆ ಆಂಗ್ಲರ ವಿರುದ್ಧ ನಡೆಸಿದ ಹೋರಾಟದಲ್ಲಿ ಈ ಎಲ್ಲಾ ಜನಾಂಗಳ ಕೊಡುಗೆ ಮಹತ್ತರವಾದುದು.

ಅಂಕೋಲದ ಗಂಗಾವಳಿ ನದಿ ತೀರದಲ್ಲಿರುವ 40 ಹಳ್ಳಿಗಳು ಕರಬಂಧಿ ಗ್ರಾಮಗಳೆಂದೇ ಪ್ರಸಿದ್ಧವಾಗಿವೆ. ಆ ಅವಧಿಯಲ್ಲಿ ಹೆಚ್ಚಾಗಿ ನಾಡವರೇ ಭೂ ಒಡೆಯರಾಗಿದ್ದರು. ಹೀಗಾಗಿ ಕರ ನಿರಾಕರಣೆ ಚಳುವಳಿಯಲ್ಲಿ ಸಕ್ರೀಯವಾದ ಹೋರಾಟ ನಡೆಸುವ ಅವಕಾಶ ನಾಡವ ಜನಾಂಗದವರಿಗೆ ದೊರೆಯಿತು. ಈ ಅವಧಿಯಲ್ಲಿ ತಮ್ಮ ಸರ್ವಸ್ವವನ್ನೂ ಕಳೆದುಕೊಂಡರೂ, ಆಂಗ್ಲರ ವಿರುದ್ಧ ಕೆಚ್ಚೆದೆಯ ಹೋರಾಟ ನಡೆಸಿ ಅಂಕೋಲೆಗೆ " ಕರ್ನಾಟಕದ ಬಾರ್ಡೋಲಿ" ಎಂಬ ಕೀರ್ತಿಯನ್ನು ತಂದರು. ನಾಡವರು ತೋರಿದ ಧೈರ್ಯ–ಸಾಹಸಗಳನ್ನು ಕಂಡು ಕವಿ ದಿನಕರ ದೇಸಾಯಿಯವರು ಹೀಗೆ ಮನದುಂಬಿ ಹಾಡಿದರು.

ನಾಡವರೆ ನಿಜ ನಾಡಿಗರು
ನೋಡು ಕಾಳಗವ ಹೂಡಿದರು
ಸ್ವಾತಂತ್ರ್ಯದ ಸುಖದೂಟವನುಂಡು
ವಿಜಯನಗರದಲಿ ಕಾದಹ ದಂಡು
ಉಪ್ಪು ಮಾಡುವರು ಮುಂದಕೆ ಬಂದು
ನಾಡವರೆ ನಿಜ ನಾಡಿಗರು (1)
ಹಿಂದಿನ ಹುರುಪೇ ಇಂದಿಗೂ ಮೂಡಿ
ನಾಡವರೆಲ್ಲರೂ ಒಂದೆಡೆ ಕೂಡಿ
ಗಾಂಧಿ ಮಹಾತ್ಮರ ಕೊಂಬನು ಕೇಳಿ
ನೆಗೆದು ಕಾದುವರು ಧೈರ್ಯವ ತಾಳಿ
ನಾಡವರೆ ನಿಜ ನಾಡಿಗರು
ನೋಡು ಕಾಳಗವ ಹೂಡಿದರು (2)
ಕಲ್ಲಿನ ದೇಹವು ಆರಡಿ ಉದ್ದ
ಸೋಲದು ಇವರಿದ್ದರೆ ಈ ಯುದ್ಧ
ಕನ್ನಡ ನಾಡಿನ ಶೀಖರು ಇವರು
ದೇಶದ ಗೋಸುಗ ಕಾದುತಲಿಹರು
ನಾಡವರೆ ನಿಜ ನಾಡಿಗರು
ನೋಡು ಕಾಳಗವ ಹೂಡಿದರು (3)
ಶಾಂತತೆಯಿಂದಲಿ ಕಾದಲು ಬೇಕು
ಖಡ್ಗ ತುಪಾಕಿಗಳಿಂದಿಗೆ ಸಾಕು
ಅಂದರೆ ಮುಗಿವುದು ವೈರಿಯ ಸೊಕ್ಕು

ಸಿಗುವುದು ನಮಗೆ ಸ್ವರಾಜ್ಯದ ಹಕ್ಕು
ನಾಡವರೆ ನಿಜ ನಾಡಿಗರು
ನೋಡು ಕಾಳಗವ ಹೂಡಿದರು (4)
ನಾಡಿನ ಧೀರರು ಸೆರೆಮನೆಯಲ್ಲಿ
ಸ್ವಾತಂತ್ರ್ಯದ ಸುಖ ತೊಟ್ಟಿಲಿನಲ್ಲಿ
ನಾಡವರಲಿ ಮೂಡಿರುವುದು ಸ್ವರಾಜ್ಯ
ಇದುವೆ ಭಾರತ ಭೂಮಿಯ ಭಾಗ್ಯ
ನಾಡವರೆ ನಿಜ ನಾಡಿಗರು
ನೋಡು ಕಾಳಗವ ಹೂಡಿದರು (5)
ಇದು ನಾಡವರ ಕೀರ್ತಿಗೆ ಕೋಡು ಮೂಡಿಸಿದ ಕವಿವಾಣಿ.

ಸಾಮೂಹಿಕವಾಗಿ ಈಡಿ ನಾಡವರ ಜನಾಂಗ ತಮ್ಮನ್ನು ಕರಬಂಧಿ ಹೋರಾಟದಲ್ಲಿ ತೊಡಗಿಸಿಕೊಂಡಿದ್ದು ಅವರ ತ್ಯಾಗ ಮತ್ತು ಸಾಹಸದ ಕಥೆಯಾಗಿದೆ. ಅಂದು "ಅಂಕೋಲೆ ಎಂದರೆ ನಾಡವರು. ನಾಡವರೆಂದರೆ ಅಂಕೋಲೆ" ಎಂಬ ಮಾತು ಜನಜನಿತವಾಯಿತು. ಈ ಆಂದೋಲನದಲ್ಲಿ ಭಾಗವಹಿಸಿದಲ್ಲಿ ಎದುರಿಸಬೇಕಾದ ಭೀಕರತೆಯ ಅರಿವಿದ್ದರೂ,ಸ್ವಯಂ ಪ್ರೇರಣೆಯಿಂದ ಶ್ರೀ ಕರಮಕರ ಮುಂದಾಳತ್ವದಲ್ಲಿ ಸ್ವಾತಂತ್ರ್ಯದ ಪ್ರತಿಜ್ಞೆಗೈದು ಕರಬಂಧಿ ಕಾಳಗದಲ್ಲಿ ಧುಮುಕಿದರು. ಆಂಗ್ಲ ಸರ್ಕಾರದ ದಬ್ಬಾಳಿಕೆ ಹೆಚ್ಚಾದಷ್ಟೂ ಎದೆಗುಂದದೆ, ಮತ್ತಷ್ಟು ಉತ್ಸಾಹಗೊಂಡು ಅಸಹಾಯ ಶೂರರಾಗಿ ಯಶಸ್ವಿಯಾಗಿ ಕಾದಾಡಿ
ದೇಶದ ಸ್ವಾತಂತ್ರ್ಯ ಹೋರಾಟ ಇತಿಹಾಸದಲ್ಲಿ ಚಿರ ಸ್ಥಾನವನ್ನು ಪಡೆದುಕೊಂಡರು.

**ಹೋರಾಟದ ಪ್ರೇರಣೆ–**

1921 ರ ಪೂರ್ವದಲ್ಲಿ ನಾಡವರಲ್ಲಿ ರಾಜಕೀಯ ಪ್ರಜ್ಞೆ ಅಷ್ಟೊಂದು ಜಾಗ್ರತವಾಗಿರಲಿಲ್ಲ. ಆ ಕಾಲಕ್ಕೆ ಸ್ವದೇಶಿ ಚಳುವಳಿಯ ಪ್ರಚಾರಕ್ಕೆ ಬಂದ ಕೀರ್ತನ ಕೇಸರಿ ಜಯರಾಮಾಚಾರ್ಯರಿಂದ ನಾಡವರಲ್ಲಿ ಸ್ವಾತಂತ್ರ್ಯ ಮತ್ತು ರಾಷ್ಟ್ರೀಯ ಭಾವನೆಯ ಬೀಜ ಮೊಳೆಯಿತು. ಮುಂದೆ ಶಂಕರರಾವ ಗುಲವಾಡಿ,ಪಡುಬಿದ್ರಿ ರಾಮರಾಯರು ಮತ್ತು ಗಂಗಾಧರರಾವ್ ದೇಶಪಾಂಡೆ ಮುಂತಾದವರ ಸಹವಾಸದಿಂದ ಅದು ಹೆಮ್ಮರವಾಗಿ ಬೆಳೆಯಿತು. ಅಲ್ಲಿಂದ ನಾಡವರ ಹಳ್ಳಿಗಳಲ್ಲಿ ರಾಷ್ಟ್ರೀಯ ವಿಚಾರಗಳ ಚರ್ಚೆಗಳು ಪ್ರಾರಂಭವಾದವು. ನಾಡವರಂತೂ ಗಾಂಧಿಯವರ ಭಕ್ತರಾದರು. ಖಾದಿ ಅವರ ಉಡುಪಾಯಿತು. ಗಾಂಧಿ ತತ್ವಗಳು ಅವರ ಮಂತ್ರವಾದವು. ಅಂಕೋಲ ವಂದಿಗೆ ಗ್ರಾಮದ ಹಮ್ಮಣ್ಣ ನಾಯಕರಂತೂ ತಮ್ಮ ನಡೆ–ನುಡಿಗಳಿಂದ " ಚೌಕದಳ್ಳಿ ಗಾಂಧಿ" (ಸೂರ್ವೆ,ಬಾಸಗೋಡ,ಶೆಟಗೇರಿ ಮತ್ತು ಕೊಗ್ರೆ) ಎಂದೇ ಪ್ರಸಿದ್ಧರಾದರು. ಗಾಂಧಿ ವಿಚಾರಗಳನ್ನು ತಿಳಿದಂದಿನಿಂದ ಖಾದಿಯನ್ನೇ ತೊಡಲಾರಂಭಿಸಿದರು. ನಾರು ಪಟ್ಟಿಯ ಉಡುದಾರ ಧರಿಸಿದರು ಮತ್ತು ಮಡಲು ಕೊಡೆ ಹಿಡಿದರು. ವಿದೇಶಿ ವಸ್ತುಗಳನ್ನು ಉಗ್ರವಾಗಿ ಬಹಿಷ್ಕರಿಸಿದರು.
ಪ್ರಾರಂಭದಲ್ಲಿ ನಾಡವರ ರಾಷ್ಟ್ರೀಯ ಆಂದೋಲನದ ನಾಯಕತ್ವವನ್ನು ವಹಿಸಿದವರೆಂದರೆ ಅಂಕೋಲ ಬಾಸಗೋಡ ಗ್ರಾಮದ ರಾಮನಾಯಕ, ವಂದಿಗೆ ಗ್ರಾಮದ ಹಮ್ಮಣ್ಣ ನಾಯಕ, ಬೋಳೆ ಗ್ರಾಮದ ಬೊಮ್ಮಯ್ಯ ನಾಯಕ ಮತ್ತು ಶೆಟಗೇರಿ ಗ್ರಾಮದ ಜೋಗಿ ನಾಯಕರಾಗಿದ್ದರು. ಇವರೆಲ್ಲಾ ನಾಡವರು ನೆಲೆಸಿದ ಹಳ್ಳಿ–ಹಳ್ಳಿಗೂ ಸಂಚರಿಸಿ ರಾಷ್ಟ್ರೀಯ ಭಾವನೆಯನ್ನು ಬಿತ್ತಿ ಜನಜಾಗ್ರತಿ ಉಂಟುಮಾಡಿದರು. ಪರಿಣಾಮ ಚಳುವಳಿಯ ಕಾವೇರಿ ನಾಡವರ ಪ್ರತಿ ಹಳ್ಳಿಗಳಲ್ಲೂ ಉತ್ತೇಜಕ ವಾತಾವರಣ ಉಂಟಾಯಿತು. ನಾಡವರು ಆಂಗ್ಲರ ವಿರುದ್ಧ ಯುದ್ಧೋತ್ಸಾಹದಲ್ಲಿ ಸಿದ್ಧರಾದ ಸಮಯದಲ್ಲಿ ಗಾಂಧಿಯವರು ಉಪ್ಪಿನ ಸತ್ಯಾಗ್ರಹಕ್ಕೆ ಕರೆ ನೀಡಿದರು. ಇದರಿಂದ ಪ್ರಭಾವಿತರಾದ ನಾಡವರೂ ಕೂಡ ಉಪ್ಪಿನ ಸತ್ಯಾಗ್ರಹಕ್ಕೆ ಸಜ್ಜಾದರು.

**ಅಂಕೋಲೆಯ ಉಪ್ಪಿನ ಸತ್ಯಾಗ್ರಹದಲ್ಲಿ ನಾಡವರ ಪಾತ್ರ–**

ಏಪ್ರಿಲ್ 13,1930 ರಂದು ಅಂಕೋಲೆಯಲ್ಲಿ ಉಪ್ಪಿನ ಕಾಯಿದೆ ಭಂಗ ಮಾಡುವುದೆಂದು ನಿರ್ಧಯಸಲಾಗಿತ್ತು. ಅಂಕೋಲೆಯಲ್ಲಿ ಜನಸಾಗರ. ಅಂಕೋಲೆಯ ವಿವಿಧ ಜನಾಂಗಗಳ ಜನಸೇರಿ ಉಪ್ಪಿನ ಸತ್ಯಾಗ್ರಹದ ಯಶಸ್ಸಿಗೆ ಕಾರಣರಾದರು. ನಾಡವರು ನಾಯಕತ್ವದ ಮಂಚೂಣಿಯಲ್ಲಿದ್ದರು. ಸುಮಾರು ಒಂದೂವರೆ ಮೈಲುದ್ದದ ಮೆರವಣಿಗೆ ಮಧ್ಯಾಹ್ನ 1 ಘಂಟೆಗೆ ಸರಿಯಾಗಿ ಎಂ.ಪಿ.ನಾಡಕರ್ಣಿಯವರ ನೇತ್ರತ್ವದಲ್ಲಿ ಜಯಘೋಷದೊಂದಿಗೆ ಮೆರವಣಿಗೆ ಹೊರಟು ಸಮೀಪದ ಪೂಜಗೇರಿಯ ವಿಶಾಲ ಬಯಲಿನಲ್ಲಿ ಒಂದಡೆ ಸೇರಿದರು. ಅಲ್ಲಿಂದ ಸಮುದ್ರಕ್ಕೆ ಹೋಗಿ ಉಪ್ಪು ಮಣ್ಣು ಮತ್ತು ಉಪ್ಪು ನೀರು ಸಂಗ್ರಹಿಸಿ ತಂದು ಅಂಕೋಲೆಯ ತಾಲೂಕು ಕಛೇರಿಗೆ ಹಿಂತಿರುಗಿತು. ಅಲ್ಲಿಯೇ ವರ್ತುಲವಾಗಿ ನಿಂತು ಒಲೆ ಹೊತ್ತಿಸಿ ಉಪ್ಪು ನೀರಿನ ಗಡಿಗೆಗಳನ್ನಿಟ್ಟು ಸತ್ಯಾಗ್ರಹಿಗಳು ಉಪ್ಪು ತಯಾರಿಸಿ ಲಿಲಾವು ಮಾಡಿದರು.
ಈ ಉಪ್ಪಿನ ಸತ್ಯಾಗ್ರಹದಲ್ಲಿ ನಾಡವರ ನೆಲೆಗಳಾದ ವಂದಿಗೆ, ಶೆಟಗೇರಿ, ಹಿಚಕಡ, ಕಣಿಗೀಲ್, ಸೂರ್ವೆ, ಬಾಸಗೋಡ್ ಮತ್ತು ಬೆಲೇಕೇರಿ ಮುಂತಾದ ಕಡೆಗಳಿಂದ ನೂರಾರು ಸ್ತ್ರೀ–ಪುರುಷರು ಭಾಗವಹಿಸಿ ಉಪ್ಪು ತಯಾರಿಸಿ ಮಾರಾಟ ಮಾಡಿದರು. ಅಂಕೋಲೆಯಲ್ಲಿ ಜನಸಾಗರವನ್ನು ಕಂಡು ಬೆದರಿದ ಪೋಲಿಸರು ನಾಡವರ ನಾಯಕರನ್ನು ಬಂಧಿಸಿದರೆ ಈ ಸತ್ಯಾಗ್ರಹವನ್ನು ಹತ್ತಿಕ್ಕಬಹುದೆಂದು ನಿರ್ಧರಿಸಿ ಸಂತೆಯಲ್ಲಿ ಉಪ್ಪು ಮಾರುತ್ತಾ ಕುಳಿತಿದ್ದ ವಂದಿಗೆಯ ಹಮ್ಮಣ್ಣ ನಾಯಕ & ದೇವಣ್ಣ ನಾಯಕ, ಬಾಸಗೋಡದ ಬೊಮ್ಮಯ್ಯ ನಾಯಕ ಮತ್ತು ಕಣಗೀಲದ ಬೀರಣ್ಣ ನಾಯಕ ಹೀಗೆ ನಾಲ್ವರನ್ನು ಬಂಧಿಸಿ ಸೆರೆಮನೆ ತಳ್ಳಿದರು. ಆದರೂ ಎದೆಗುಂದದ ನಾಡವರು ಶಾಂತ ರೀತಿಯಿಂದಲೇ ಉಪ್ಪು ಮಾರುವ ಕಾಯಕವನ್ನು ಮುಗಿಸಿ ತಾಲೂಕು ಕಛೇರಿಯ ಮುಂದಿನ ಬಯಲು ಪ್ರದೇಶಕ್ಕೆ ಬಂದು ಸಭೆ ಸೇರಿದರು. ಅಂದಿನ ಸಭೆಯನ್ನುದ್ದೇಶಿಸಿ ಮಾತನಾಡುತ್ತಿದ್ದ ಶೆಟಗೇರಿಯ ಜೋಗಿ ನಾಯಕರನ್ನು ಪೌಜುದಾರನು ಬಂಧಿಸಿದರೂ ತಾಳ್ಮೆಗೆಡದೇ ಜಯಘೋಷದಿಂದಲೇ ಅವರನ್ನು ಬೀಳ್ಕೊಟ್ಟರು. ಗಾಂಧೀಜಿಯವರ ಶಾಂತಿ ಸಂದೇಶವನ್ನು ಚಾಚೂ ತಪ್ಪದೆ ಪಾಲಿಸಿದರು.
ಬಂಧಿತರಲ್ಲಿ ಜೋಗಿ ನಾಯಕರಿಗೆ 6 ತಿಂಗಳ ಸಶ್ರಮ ಶಿಕ್ಷೆ ಮತ್ತು 100 ರೂ. ದಂಡ ಹಾಗೂ ಇತರ ನಾಲ್ವರಿಗೆ 4 ತಿಂಗಳ ಸಶ್ರಮ ಶಿಕ್ಷೆ ಮತ್ತು 50 ರೂ. ದಂಡ ವಿಧಿಸಲಾಯಿತು. ಆದರೂ ನಾಡವರ ಹೋರಾಟದ ದಾಹ ಇಂಗಲಿಲ್ಲ. ತಮ್ಮ ಬದುಕು ಕೃಷಿಯನ್ನು ಕೂಡ ಅಲಕ್ಷಿಸಿ ಸತ್ಯಾಗ್ರಹವನ್ನೇ ಒಂದು ಪವಿತ್ರ ಯಜ್ಞ ಎಂಬಂತೆ ಮಳೆಗಾಲ ಪ್ರಾರಂಭವಾಗುವವರೆಗೂ ಉಪ್ಪಿನ ಸತ್ಯಾಗ್ರಹ ನಡೆಸಿದರು.

**ಸಾಣೇಕಟ್ಟಿನ ಉಪ್ಪಿನ ಸತ್ಯಾಗ್ರಹದಲ್ಲಿ ನಾಡವರು.**

ಕುಮಟಾ ತಾಲೂಕಿನ ಸಾಣೇಕಟ್ಟಿನಲ್ಲಿ ದೊಡ್ಡ ಉಪ್ಪಿನ ಆಗರವಿದೆ. ಅಲ್ಲಿಯೂ ಕೂಡ ಮೇ 31,1930 ರಲ್ಲಿ ಉಪ್ಪಿನ ಸತ್ಯಾಗ್ರಹ ನಡೆಯಿತು. ಅಲ್ಲಿ ಸಮೀಪದ ತೊರ್ಕೆ ಮತ್ತು ಹಿರೇಗುತ್ತಿ ಗ್ರಾಮದ ನಾಡವರು ಪ್ರಧಾನ ಪಾತ್ರ ವಹಿಸಿದ್ದರು. ಹಿರೇಗುತ್ತಿ ವೆಂಕಟರಮಣ ನಾಯಕರು ಸಾವಿರಾರು ಜನರೊಂದಿಗೆ ಸಾಣೇಕಟ್ಟಿನ ಉಪ್ಪಿನ

ಆಗರಕ್ಕೆ ತೆರಳಿ ಹಣ ನೀಡದೆ ಉಪ್ಪಿನ ಮೂಟೆಗಳನ್ನು ಹೊತ್ತು ತಂದರು. ತೊರ್ಕೆಯ ಬಳಿ ನಿಂತ ಸುಂಕದ ಅಧಿಕಾರಿಗೆ ಮತ್ತು ಪೋಲಿಸರಿಗೆ ಅವರನ್ನು ತಡೆಯುವ ಧೈರ್ಯವಾಗಲಿಲ್ಲ. ಹೀಗೆ ಉಪ್ಪಿನ ಸತ್ಯಾಗ್ರಹದ ಯಶಸ್ಸಿನಲ್ಲಿ ನಾಡವರ ಪಾಲು ಹಿರಿದಾದುದು.

**ನಾಡವರ ಜಂಗಲ್ (ಅರಣ್ಯ) ಸತ್ಯಾಗ್ರಹ.**

ಕಾಂಗ್ರೆಸ ಕಾರ್ಯಕಾರಿ ಸಮಿತಿಯಿಂದ ಸತ್ಯಾಗ್ರಹವನ್ನು ಉಪ್ಪಿಗಷ್ಟೇ ಸೀಮಿತಗೊಳಿಸದೆ ಅರಣ್ಯ ಕಾಯಿದೆ ಭಂಗವನ್ನು ಆರಂಭಿಸುವಂತೆ ಆದೇಶ ಬಂದಿತು. ಅಂಕೋಲೆಯಲ್ಲಿ ಅರಣ್ಯ ಸತ್ಯಾಗ್ರಹ 1930,ಅಗಷ್ಟ 6 ರಂದು ಆರಂಭವಾಯಿತು. ಉಪ್ಪಿನ ಸತ್ಯಾಗ್ರಹದ ಯಶಸ್ಸಿನಿಂದ ಉತ್ಸಾಹಿತರಾದ ಅಂಕೋಲಿಗರು ತಳಗದ್ದೆ ಅರಣ್ಯ ಹೊಕ್ಕು ಮರ ಕಡಿದರು. ಅಲ್ಲಿಂದ ಮೆರವಣಿಗೆಯಲ್ಲಿ ದೇಶಭಕ್ತಿ ಗೀತೆಗಳನ್ನು ಹಾಡುತ್ತಾ ಅಂಕೋಲೆಗೆ ಮರಳಿದರು. ಸುತ್ತಮುತ್ತಲಿನ ಹಳ್ಳಿಗಳ ನಾಡವರು ತಮ್ಮ ಸಮೀಪದ ಜಂಗಲ್ ಹೊಕ್ಕು ಮರ ಕಡಿದರು. ಅರಣ್ಯ ಕಾಯಿದೆ ಭಂಗ ಮಾಡಿರುವ ಸಂಕೇತವಾಗಿ ಸಣ್ಣ–ಸಣ್ಣ ಕಟ್ಟಿಗೆ ತುಂಡುಗಳನ್ನು ಹಿಡಿದುಕೊಂಡು ಜಯಘೋಷ ಮಾಡುತ್ತ ಮೆರವಣಿಗೆ ಸೇರಿಕೊಂಡರು. ಪೋಲಿಸರು ಮೆರವಣಿಗೆಯ ಮೇಲೆ ಲಾಠಿ ಚಾರ್ಜ ಮಾಡಿದರು. ಮೆರವಣಿಗೆಯಲ್ಲಿದ್ದ ನಾಡವ ಯುವಕರು ಪೋಲಿಸ್ ಲಾಠಿಗೆ ಎದೆಯೊಡ್ಡಿ ನಿಂತರು.

ಹೀಗೆ ಈ ಮೇಲಿನ ಹೋರಾಟಗಳು ನಾಡವ ಜನಾಂಗದಲ್ಲಿ ದೇಶಪ್ರೇಮವನ್ನು ತುಂಬಿ ಅವರನ್ನು ಕರಬಂಧಿ ಹೋರಾಟಕ್ಕೆ ಅಣಿಗೊಳಿಸಿತು.

**ನಾಡವರ ಕರನಿರಾಕರಣೆ ಕಹಳೆ**

ಭಾರತದ ಸ್ವಾತಂತ್ರ್ಯ ಚರಿತ್ರೆಯಲ್ಲಿ ಆಂಗ್ಲರ ಆಡಳಿತ ವ್ಯವಸ್ಥೆಯನ್ನೇ ಕಂಗೆಡಿಸಿದ್ದು ಕರನಿರಾಕರಣ ಆಂದೋಲನವಾಗಿದೆ. ಉತ್ತರ ಭಾರತದಲ್ಲಿ ಸರ್ದಾರ ವಲ್ಲಭಾಯಿ ಪಟೇಲರ ನಾಯಕತ್ವದಲ್ಲಿ ಬಾರ್ಡೋಲಿ ಕರನಿರಾಕರಣ ಚಳುವಳಿಯಲ್ಲಿ ಜನಜನಿತವಾದರೆ, ದಕ್ಷಿಣ ಭಾರತದಲ್ಲಿ ಕರ್ನಾಟಕದ ಉತ್ತರಕನ್ನಡ ಜಿಲ್ಲೆಯ ಅಂಕೋಲ, ಸಿರ್ಸಿ ಮತ್ತು ಸಿದ್ಧಾಪುರ ತಾಲೂಕುಗಳು ಮಂಚೂಣಿ ಸ್ಥಾನದಲ್ಲಿದ್ದವು. ಸಿರ್ಸಿ ಮತ್ತು ಸಿದ್ಧಾಪುರದಲ್ಲಿ ಹವ್ಯಕ ಬ್ರಾಹ್ಮಣರು ಅಂಕೋಲೆಯಲ್ಲಿ ಕರನಿರಾಕರಣ ಚಳುವಳಿಯ ನಾಯಕತ್ವವನ್ನು ವಹಿಸಿದರೆ, ಅಂಕೋಲೆಯಲ್ಲಿ ಮಾತ್ರ ಕರಬಂಧಿಗೆ ಕಾರಣರೂ, ಮುಖ್ಯ ಪ್ರಾಣರೂ ನಾಡವರೆ ಆಗಿದ್ದರು. ಏಕೆಂದರೆ ಸ್ವಂತ ಜಮೀನು ಇರುವವರು ಮಾತ್ರ ಈ ಚಳುವಳಿಯಲ್ಲಿ ಭಾಗವಹಿಸಬಹುದಿತ್ತು. ಆ ಕಾಲದಲ್ಲಿ ಹಳ್ಳಿಗಳಲ್ಲಿ ನಾಡವರಿಗೆ ಮಾತ್ರ ಸ್ವಂತ ಜಮೀನಿತ್ತು. ಅದೇ ರೀತಿ ಉಳುವರೆಯಲ್ಲಿ ಭೂಮಾಲಕರಾದ ಕೆಲವು ಹಾಲಕ್ಕಿ ಒಕ್ಕಲಿಗರೂ ಕೂಡ ಕರಬಂಧಿ ಹೋರಾಟಕ್ಕೆ ಸಾಥ್ ನೀಡಿದರು. ತಮ್ಮ ಆಸ್ತಿಯೆಲ್ಲಾ ಕೈ ಬಿಟ್ಟರೂ ಈ ಜನ ಕಂದಾಯ ಕಟ್ಟಲು ಒಪ್ಪಲಿಲ್ಲ.

ಎರಡನೆ ದುಂಡು ಮೇಜಿನ ಪರಿಷತ್ತು ವಿಫಲವಾದ ನಂತರ ಗಾಂಧಿಯವರು ಕ್ರಿ.ಶ 1932 ರಲ್ಲಿ ಕರನಿರಾಕರಣ ಚಳುವಳಿಯ ಘೋಷಣೆ ಮಾಡಿದರು. ಕರನಿರಾಕರಣ ಚಳುವಳಿಯ ಸಂಘಟನೆಯ ಸಮಯ ತೀರ ಕಡಿಮೆಯಿತ್ತು. ಅಂಕೋಲೆಯಲ್ಲಿ ಜನವರಿ 15 ಕ್ಕೆ ಮೊದಲ ಕಂತಿನ ತೀರ್ವೆ ವಸೂಲಿ ಕಾರ್ಯ ಆರಂಭವಾಗುವುದರಲ್ಲಿತ್ತು. ಹೀಗಾಗಿ ಕರನಿರಾಕರಣ ಚಳುವಳಿಯ ಮೊದಲ ಸಭೆ ಸೂರ್ವೆಯ ಕಲಶ ದೇವಾಲಯದಲ್ಲಿ ಸೇರಿತ್ತು. ಈ ಸಭೆಯಲ್ಲಿ ಜನಾಂಗದ ಧುರೀಣರಾದ ಬಾಸಗೋಡದ ರಾಮನಾಯಕ, ಬೋಳೆಯ ಬೊಮ್ಮಯ್ಯ ನಾಯಕ & ದೇವಣ್ಣ ನಾಯಕ, ಕಣಗೀಲದ ಹಮ್ಮಣ್ಣ ನಾಯಕ & ಬೊಮ್ಮಣ್ಣ ನಾಯಕ ಮತ್ತು ಶೆಟಗೇರಿಯ ಜೋಗಿ ನಾಯಕ ಮುಂತಾದವರು ಉಪಸ್ಥಿತರಿದ್ದರು. ಅಲ್ಲಿ ಆರ್.ಆರ್.ದಿವಾಕರ ಮತ್ತು ಕರಮಕರ ಕರಬಂಧಿ ಹೋರಾಟದ ಬಗ್ಗೆ ತಿಳಿಸಿ ಹೇಳಿದರು. ಕರ ನಿರಾಕರಣೆ ಮಾಡಿದಲ್ಲಿ ನಿಮ್ಮ ಆಸ್ತಿ–ಪಾಸ್ತಿ ಜಪ್ತಾಗಿ ಕುಟುಂಬವೇ ಬೀದಿಪಾಲಾಗಬಹುದು, ಜೈಲು ಶಿಕ್ಷೆ ಅನುಭವಿಸಬೇಕಾಗಬಹುದು. ಅದಕ್ಕೆ ನೀವೆಲ್ಲಾ ದೈಹಿಕವಾಗಿ,ಮಾನಸಿಕವಾಗಿ ಸಿದ್ಧರಾಗಬೇಕು. ಏನೇ ಕಷ್ಟ ಎದುರಿಸಬೇಕಾಗಿ ಬಂದರೂ ಗಾಂಧಿಯವರ ಅಹಿಂಸಾ ತತ್ವಗಳನ್ನು ಪಾಲಿಸಬೇಕೆಂದು ತಿಳಿಸಿದರು. ಅಲ್ಲಿ ಸೇರಿದ ಜನರಿಂದ ಪರ–ವಿರೋಧ ವಿಚಾರಗಳು ವ್ಯಕ್ತವಾದವು. ಸಭೆಯಲ್ಲಿದ್ದ ಕೆಲವು ಹಿರಿಯರು "ಸರಕಾರ ದಬ್ಬಾಳಿಕೆ ಪ್ರಾರಂಭಿಸಿದಾಗ ಅಹಿಂಸಾ ವ್ರತವನ್ನು ಪಾಲಿಸುವಷ್ಟು ತಾಳ್ಮೆ ನಾಡವ ಯುವಕರಲ್ಲಿ ಉಳಿಯಬಹುದೇ?" ಎಂಬ ಪ್ರಾಮಾಣಿಕ ಸಂಶಯ ಮುಂದಿಟ್ಟರು. ಅಂದೇ ಶಿಕ್ಷೆ ಮುಗಿಸಿ ಹೊರಬಂದ ಯುವಕ ಶೆಟಗೇರಿಯ ಜೋಗಿ ನಾಯಕ –" ಈ ಚಳುವಳಿಯಲ್ಲಿ ಭಾಗವಹಿಸುವುದು ನಮ್ಮ ಧರ್ಮ.ನಾಡವರ ಕ್ಷಾತ್ರವ್ರತ್ತಿಗೆ ಭೂಷಣ.ಕೆಲಸ ಮಾಡುತ್ತಾ ಹೋದಂತೆ ಕಾರ್ಯತತ್ಪರತೆ ಹೆಚ್ಚಿ ಅಹಿಂಸಾ ತತ್ವಗಳು ಜನರಲ್ಲಿ ಬಲಗೊಳ್ಳುವುದು." ಎಂದು ಹುರಿದುಂಬಿಸಿದರು. ಬಾಸಗೋಡದ ರಾಮನಾಯಕರಂತೂ "ಅಳಿವುದು ಕಾಯ ಉಳಿವುದು ಕೀರ್ತಿ" ಕರ ನಿರಾಕರಣೆ ನಿರ್ಣಯವನ್ನು ಸ್ವೀಕರಿಸುವುದು ನಮ್ಮ ಧರ್ಮ ಎಂದು ಆವೇಶಭರಿತ ಭಾಷಣ ಮಾಡಿದರು. ಆಗ ಆರ್.ಆರ್.ದಿವಾಕರ ಸಭೆಯಲ್ಲಿದ್ದವರ ವೈಯಕ್ತಿಕ ಅಭಿಪ್ರಾಯವನ್ನು ತಿಳಿಸಲು ವಿನಂತಿಸಿಕೊಂಡಾಗ ಸೂರ್ವೆಯ ಬೊಮ್ಮಯ್ಯ ಪಿ.ನಾಯಕರು– "ಯಾರು ಮಾಡಲಿ ಬಿಡಲಿ ನಾನಂತೂ ಮಹಾತ್ಮರನ್ನು ಸ್ಮರಿಸಿ ಕರ ನಿರಾಕರಣೆಯನ್ನು ಮಾಡೇ ತೀರುವೆ." ಎಂದು ಮೊದಲು ಪ್ರತಿಜ್ಞೆ ಮಾಡಿಯೇ ಬಿಟ್ಟರು. ಇದರಿಂದ ಸ್ಫೂರ್ತಿಗೊಂಡ ಬೋಳೆಯ ದೇವಣ್ಣ ನಾಯಕ ಎದ್ದು ನಿಂತು –" ಭೂಮಿ ಹೋದರೆ ಹೋಗಲಿ.ಬೇಕಾದ ಆಪತ್ತು ಬರಲಿ.ನಮ್ಮೂರಿನಲ್ಲಿ ನಾನೊಬ್ಬನಂತೂ ಕರ ನಿರಾಕರಣೆ ಮಾಡಿಯೇ ತೀರಿತ್ತೇನೆ." ಎಂದು ಭಾಷೆ ತೊಟ್ಟು ಕೈಮುಗಿದು ಕುಳಿತುಕೊಂಡರು. ಅಷ್ಟೇ ತಡ ಸಭೆಯಲ್ಲದ್ದ ಎಲ್ಲರೂ ಒಕ್ಕೊರಲಿನಿಂದ ಅವರನ್ನು ಬೆಂಬಲಿಸಿದರು. ಇವರೆಲ್ಲರ ಹುರುಪು ಈಡಿ ಸಮಾಜವೇ ಕರ ನಿರಾಕರಣೆ ಹೋರಾಟದಲ್ಲಿ ಧುಮುಕಿತು.

ಕರಬಂಧಿ ಹೋರಾಟದ ಮೊದಲ ಕಾರ್ಯಕ್ರಮವಾಗಿ ಪಾಟೀಲಕಿಗೆ ರಾಜೀನಾಮೆ ಕೊಡಿಸುವುದು. ಅಂಕೋಲಾ ತಾಲೂಕಿನಲ್ಲೇ ತಮ್ಮ ಪಾಟೀಲ ಹುದ್ದೆಗೆ ಮೊದಲು ರಾಜೀನಾಮೆ ನೀಡಿದ ಹೆಮ್ಮೆ ಜನಾಂಗದ ವಾಸ್ರೆಯ ಸುಬ್ರಾಯ ಆರ್.ನಾಯಕರದ್ದಾಗಿದೆ. ಕೊನೆಯವರೆಗೂ ಹೋರಾಟದಲ್ಲಿ ಗಟ್ಟಿಯಾಗಿದ್ದು ಹಲವು ಬಾರಿ ಜೈಲು ಶಿಕ್ಷೆ ಅನುಭವಿಸಿದರು. ಇವರನ್ನೇ ಅನುಸರಿಸಿ ಬೋಳೆಯ ಪಟೇಲ ಕೃಷ್ಣ ನಾಯಕ, ವಂದಿಗೆ ಪಟೇಲ ಜೋಗಿ ನಾಯಕ ಮತ್ತು ಹಿಚಕಡದ ಪಟೇಲ ಬೊಮ್ಮಯ್ಯ ನಾಯಕ ಮುಂತಾದವರು ತಮ್ಮ ಪಾಟೀಲಕಿಯನ್ನು ತ್ಯಜಿಸಿದರು. ತಮ್ಮ ಹುದ್ದೆಗೆ ರಾಜೀನಾಮೆ ಪತ್ರವನ್ನು ಸಲ್ಲಿಸಲು ಮೆರವಣಿಗೆ ಹೊರಡಿಸಿದ ಇವರುಗಳ ಮೇಲೆ ಪೋಲಿಸರು ಲಾಠಿ ಚಾರ್ಜ ಮಾಡಿದರು.

ಬ್ರಿಟೀಷ ಸರ್ಕಾರ ಕರಬಂಧಿ ಹೋರಾಟ ತಡೆಯಲು ಹಲವು ಪ್ರಯತ್ನ ನಡೆಸಿತು. ಅಧಿಕಾರಿಗಳು ಊರೂರಿಗೆ ಸಂಚರಿಸಿ ಭೂ ಮಾಲೀಕರಿಗೆ ಕರವನ್ನು ತುಂಬುವಂತೆ ಮನವೊಲಿಸಲು ಪ್ರಯತ್ನಿಸಿದರು. ಬ್ರಿಟೀಷರ ಪರವಾಗಿದ್ದ ಕೆಲವು ಜಮೀನ್ದಾರರಿಂದ ಬೆದರಿಕೆ ಹಾಕಿಸಿದರು. ಆದರೂ ನಾಡವರು " ಕರನಿರಾಕರಣೆ ಶತಸಿದ್ಧ, ಬಂದದ್ದು ಬರಲಿ,ಎಂಥ ಕಷ್ಟ–ನಷ್ಟಗಳಿಗೂ ನಾವು ಸಿದ್ಧರು" ಎಂದು ಅಚಲ ನಿರ್ಧಾರ ಮಾಡಿದರು. ಅಲ್ಲಿಂದ ಶುರುವಾಯಿತು ಅವರ ಗೋಳಿನ ವ್ಯಥೆ. ದೇಶಕ್ಕಾಗಿ ಮಾಡಿದ

ಸಮರ್ಪಣೆಯ ಕಥೆ.

ಕರ ವಸೂಲಿಗಾಗಿ ಸರ್ಕಾರ ತೀವ್ರವಾದ ಜಪ್ತಿಯ ಕ್ರಮ ಅನುಸರಿಸಿತು. ಜಪ್ತಿಯ ಕಾರ್ಯವು ಮೊದಲು ನಾಡವರ ಹಳ್ಳಿಯಾದ ಬಾಸಗೋಡದಲ್ಲಿ ನಡೆಯಿತು. ಸರ್ಕಾರದ ಅಧಿಕಾರಿಗಳು ಕೇವಲ ನಾಲ್ಕಾರು ರೂಪಾಯಿ ತೀರ್ವೆಯ ಬಗ್ಗೆ ನೂರಾರು ರೂಪಾಯಿಗಳ ವಸ್ತುಗಳನ್ನು ಜಪ್ತಿ ಮಾಡಿ ಲಿಲಾವು ಮಾಡಿತು. ಮನೆಯಲ್ಲಿ ತುಂಬಿಟ್ಟ ಅಕ್ಕಿ,ಕಾಯಿ,ಬೆಲ್ಲ,ಅಡಿಕೆ,ಬಾಳೆಕೊನೆ ಮತ್ತು ಬೆಲೆಬಾಳುವ ವಸ್ತುಗಳನ್ನು ಜಪ್ತಿ ಮಾಡಲಾಯಿತು. ಕೆಲವರು ಮುಂಜಾಗ್ರತೆಯಿಂದ ಧವಶಸ-ಧಾನ್ಯಗಳನ್ನು ಬೇರೆಡೆ ಬಚ್ಚಿಟ್ಟರೆ ಅವರ ಕೋಳಿ,ದನ-ಕರು,ಎತ್ತಿನಗಾಡಿ ಮತ್ತು ಪೀಠೋಪಕರಣಗಳನ್ನು ಜಪ್ತಿಯ ಹೆಸರಿನಲ್ಲಿ ಪೋಲಿಸರು ಲೂಟಿ ಮಾಡಿದರು. ಕಂದಾಯ ಖಾತೆದಾರನ ಮನೆಯಲ್ಲಿ ಏನೂ ಸಿಗದಿದ್ದಲ್ಲಿ ಅಣ್ಣನ ತೀರ್ವೆಯ ಬಗ್ಗೆ ತಮ್ಮನ ಆಸ್ತಿ, ಒಡೆಯನ ತೀರ್ವೆಯ ಬಗ್ಗೆ ರೈತರ ಆಸ್ತಿಯ ಜಪ್ತಿ ನಡೆಯಿತು. ಬಹುತೇಕ ನಾಡವರ ಹಳ್ಳಿ ಬಾಸಗೋಡ;

ಸೂರ್ವೆ,

ಬೋಳೆ,ಶೆಟಗೇರಿ,ಹಿಚಕಡ,ಕಣಗೀಲ,ವಂದಿಗೆ,ವಾಸ್ರೆ,ಶಿರಗುಂಜಿ,ನಾಡು ಮಾಸ್ಕೇರಿ,ಅಗ್ರಗೋಣ ಮತ್ತು ಸಗಡಗೇರಿ ಮುಂತಾದ ಗ್ರಾಮಗಳಲ್ಲಿ ನಾಡವರ ಆಸ್ಥಿಯನ್ನು ಪೋರ್-ಫಿಟ್ ಮಾಡಲಾಯಿತು. “ವರ್ಷವಿಡೀ ಅಕ್ಕಿ-ಬೆಲ್ಲ-ಕಾಯಿಯಿಂದ ತುಂಬಿರುತ್ತಿದ್ದ ನಾಡವರ ಮನೆಗಳೆಲ್ಲಾ ಬರಿದಾಗಿ ಕೇವಲ ಮಣ್ಣಿನ ಗಡಿಗೆಗಳು ಮಾತ್ರ ಕಾಣುತ್ತಿದ್ದವು. ಆದರೂ ಧೃತಿಗೆಡದ ನಾಡವರು ಕರಬಂಧಿಯನ್ನು ಮುಂದುವರೆಸಿದರು.

ಬ್ರಿಟೀಷ ಸರ್ಕಾರ ಕರಬಂಧಿ ಹೋರಾಟ ಹತ್ತಿಕ್ಕಲು ಉಗ್ರ ಕ್ರಮ ಅನುಸರಿಸಿದರು. ನಾಡವ ಮುಖಂಡರ ಮತ್ತು ಕಾರ್ಯಕರ್ತರನ್ನು ಬಂಧಿಸುವ ಕಾರ್ಯ ಪ್ರಾರಂಭಿಸಿತು. ಪೋಲಿಸರು ಹಗಲು ರಾತ್ರಿಯನ್ನದೆ ಹಳ್ಳಿ-ಹಳ್ಳಿಗೆ ನುಗ್ಗಿ ಸಿಕ್ಕ ಸಿಕ್ಕ ಕಾರ್ಯಕರ್ತರನ್ನು ಬಂಧಿಸಲಾರಂಭಿಸಿದರು. ಹೀಗಾಗಿ ಕಾರ್ಯಕರ್ತರು ವೇಷ ಮರೆಸಿಕೊಂಡು ಓಡಾಡಬೇಕಾಯಿತು. ಪೋಲಿಸರು ತಪ್ಪಿಸಿಕೊಂಡವರಿಗಾಗಿ ಹುಡುಕಾಡಲಾರಂಭಿಸಿದರು. ಮನೆಯಲ್ಲಿ ಮಲಗಿದ್ದ ಹೆಂಗಸರನ್ನು ಎಬ್ಬಿಸಿ ನಿಮ್ಮ ಗಂಡನನ್ನು ತೋರಿಸಿ, ಇಲ್ಲವಾದಲ್ಲಿ ಬೆತ್ತಲಾಗಿ ನಿಲ್ಲಿಸುವುದಾಗಿ ಬೆದರಿಕೆಯೊಡ್ಡುತ್ತಿದ್ದರು. ತಾಯಿಯ ಸೊಂಟದಿಂದ ಕೂಸನ್ನು ಸೆಳೆದು ವಾರಂಟಿದ್ದವರನ್ನು ತಂದು ಕೊಟ್ಟಲ್ಲಿ ಮಾತ್ರ ಕೂಸನ್ನು ವಾಪಸ್ಸು ಮಾಡುವುದಾಗಿ ಹಿಂಸಿಸುತ್ತಿದ್ದರು. ಅಲ್ಲಿ ಬಿಸಿರಕ್ತದ ತರುಣರಿದ್ದರು. ಪೋಲಿಸರ ಸೊಂಟ-ರಟ್ಟೆ ಮುರಿದು ಕಟ್ಟಿ ಹಾಕಬಲ್ಲ ವೀರ ಕಲಿಗಳಿದ್ದರು. ಆದರೆ ಅವರೆಲ್ಲಾ ಗಾಂಧಿಯವರ ಅಹಿಂಸಾವಾದಕ್ಕೆ ತಲೆಬಾಗಿದ್ದರು. ತಮಗಾಗಲೀ,ತಮ್ಮ ಹೆಂಡಿರು ಮಕ್ಕಳಿಗಾಗಲೀ ಎರಡನೆಯವರಿಂದ ಸ್ವಲ್ಪವೂ ಅವಮಾನವಾಗುವುದನ್ನು ಸಹಿಸದ ನಾಡವರು ಅಹಿಂಸಾವಾದಿಗಳಾಗಿ ಹೋರಾಟ ನಡೆಸಿದ್ದು ನಿಜವಾಗಿಯೂ ಆಶ್ಚರ್ಯವೇ ಸರಿ. ನಾಡವರ ಚಿಕ್ಕ ಬಾಲಕರೂ ಕೂಡಾ ಸತ್ಯಾಗ್ರಹಿಗಳಾಗಿದ್ದರು. ಪೋಲಿಸರು ಊರನ್ನು ಪ್ರವೇಶಿಸುತ್ತಿದ್ದಂತೆ ಬಾಲಕರು “ಭೋಲೋ ಭಾರತ ಮಾತಾಕೀ ಜೈ” ಎಂದು ಕೂಗುತ್ತಿದ್ದರಂತೆ. ಆ ತಕ್ಷಣ ಊರಲ್ಲಿದ್ದ ಕಾರ್ಯಕರ್ತರೆಲ್ಲಾ ಗುಪ್ತ ಸ್ಥಾನ ಸೇರಿಬಿಡುತ್ತಿದ್ದರು. ಪೋಲಿಸರು ನಿರ್ಗಮಿಸುತ್ತಿದ್ದಂತೆ “ ಗಾಂಧಿಯೇ ಗಾಂಧಿ; ಸರ್ವತ್ರ ಗಾಂಧಿ” ಎಂದು ಹಾಡುತ್ತಿದ್ದಂತೆ ಕಾರ್ಯಕರ್ತರು ಊರನ್ನು ಸೇರಿಕೊಳ್ಳುತ್ತಿದ್ದನು.

ಅಂಕೋಲೆಯ ಕರಬಂಧಿ ನಾಯಕರಾದ ದ.ಪ.ಕರಮಕರ ಮತ್ತು ಬಾಸಗೋಡದ ರಾಮನಾಯಕರನ್ನು ಬಂಧಿಸಿದರೆ ಚಳುವಳಿಯನ್ನು ಹತ್ತಿಕ್ಕಬಹುದೆಂದು ತೀರ್ಮಾನಿಸಿದ ಸರ್ಕಾರ ಅವರ ಬೆನ್ನಟ್ಟಿತು. ಅವರಿಬ್ಬರೂ ರಾತ್ರಿ ಜೂಗದಲ್ಲಿದ್ದ ಸುದ್ದಿಯನ್ನು ನಾಗಪ್ಪ ಶೆಟ್ಟಿಯಿಂದ ತಿಳಿದ ಪೋಲಿಸರು ಮಲಗಿದ್ದವರ ಮೇಲೆ ದಾಳಿ ಮಾಡಿದರು. ಕರಮಕರರು ಸೆರೆಸಿಕ್ಕಿದರೂ ಪಾದರಸದಂತೆ ಚುರುಕಾದ ರಾಮನಾಯಕರು ತಪ್ಪಿಸಿಕೊಂಡರು.ನಂತರದಲ್ಲಿ ಕರಮಕರ ಸ್ಥಾನವನ್ನು ರಾಮನಾಯಕರು ತಪ್ಪಿಸಿಕೊಂಡರು. ಪೋಲಿಸರಿಗೆ ಚಳ್ಳೆ ಹಣ್ಣನ್ನು ತಿನ್ನಿಸಿ, ಹಳ್ಳಿ-ಹಳ್ಳಿಗೂ ಸಂಚರಿಸಿ ಚಳುವಳಿಯನ್ನು ಮತ್ತೂ ಬಲಿಷ್ಟ ರೀತಿಯಲ್ಲಿ ಸಂಘಟಿಸಿದರು. ರಾಮನಾಯಕರು ಕರಬಂಧಿ ಡಿಕ್ಟೇಟರ್ ಎಂದೇ ಖ್ಯಾತರಾದರು. ಸರ್ಕಾರ ಇವರ ಹಾವಳಿಯನ್ನು ತಡೆಯದೆ ಕಂಡಲ್ಲಿ ಗುಂಡಿಕ್ಕಿ ಆದೇಶ ಹೊರಡಿಸಿತು. ಕರಮಕರರು- “ ಅಂಕೋಲೆಯ ಕರಬಂಧಿ ಚಳುವಳಿಗೆ ರಾಮನಾಯಕರೆ ಮೂಲ ಕಾರಣರು. ರಾಮನಾಯಕರಿಗೆ ಗುಜರಾತದಲ್ಲಿ ನಡೆದ ಕರನಿರಾಕರಣೆಯ ಭೀಕರ ಸ್ವರೂಪವನ್ನು ವರ್ಣಿಸಿದರೂ,ನಾವು ಎಲ್ಲಕ್ಕೂ ಸಿದ್ಧರು ಎಂದು ನಾಡವರ ಹಳ್ಳಿಗಳನ್ನು ಕರಬಂಧಿ ಹೋರಾಟಕ್ಕೆ ಅಣಿಗೊಳಿಸಿದನು. ನಾವು ಅವರ ವಿಶ್ವಾಸ ಮತ್ತು ಆಗ್ರಹಕ್ಕಾಗಿ ಅಂಕೋಲೆಗೆ ಬಂದೆವು. ಇಲ್ಲವಾದಲ್ಲಿ ಬೇರೆ ಸ್ಥಳವನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದೆವು.” ಎಂದಿದ್ದಾರೆ.

**ಕರಬಂಧಿ ಚಳುವಳಿಯಿಂದಾಗಿ ನಾಡವರು ಎದುರಿಸಬೇಕಾದ ಕಷ್ಟ-ನಷ್ಟಗಳು –**

ಕರಬಂಧಿ ಚಳುವಳಿಯಿಂದಾಗಿ ನಾಡವರು ಅನೇಕ ಕಷ್ಟ-ನಷ್ಟಗಳನ್ನು ಅನುಭವಿಸಬೇಕಾಯಿತು. ಮನೆಯ ದುಡಿಯುವ ಗಂಡಸರೆಲ್ಲರೂ ಜೈಲಿನಲ್ಲಿದ್ದರು. ಅವರ ಭೂಮಿ-ಮನೆ-ದನಕರುಗಳೆಲ್ಲಾ ಜಪ್ತಾಗಿದ್ದವು. ಅವರ ಉದ್ಯೋಗ ವ್ಯವಸಾಯ ನಿಂತು ಹೋಯಿತು. ಊರಿನಲ್ಲಿರುವ ಹೆಂಗಸರು-ಮಕ್ಕಳು-ವಯಸ್ಸಾದವರು ಬಟ್ಟೆ ಬರೆಯಿಲ್ಲದೆ,ಉಣ್ಣಲು-ತಿನ್ನಲು ಇಲ್ಲದೆ ಹಸಿವೆಯಿಂದ ಬಳಲಬೇಕಾಯಿತು.ಮನೆಯಿಲ್ಲದೇ

ಗುಡಿಸಿಲಿನಲ್ಲಿ,ಬಯಲಿನಲ್ಲಿ,ಬೇರೆಯವರ ಮನೆಯ ಜಗಲಿಯಲ್ಲಿ ಮಲಗಬೇಕಾಯಿತು.ಇಂತಹ

ಪೋರ್-ಫಿಟ್ ಆದ ಮನೆಗಳಲ್ಲಿ ಪೋಲಿಸರು ಬಂದು ವಾಸ ಮಾಡಿದರು.

ಕರಬಂಧಿ ಚಳುವಳಿಯಲ್ಲಿ ನಾಡವರ ಹಳ್ಳಿಗಳು ತೊಂದರೆಗೀಡಾಗಿರುವುದನ್ನು ವರದಿಯಲ್ಲಿ ಈ ರೀತಿ ಉಲ್ಲೇಖಿಸಲಾಗಿದೆ. ವಿಶೇಷವಾಗಿ ಹಾನಿಗೀಡಾದ ಹಳ್ಳಿಗಳೆಂದರೆ ಸೂರ್ವೆ, ಹಿಚಕಡ, ಬೋಳೆ ಮತ್ತು ಕಣಗೀಲ. ಈ ಹಳ್ಳಿಗಳಲ್ಲಿ ಹೆಚ್ಚು ಹಾನಿಗೀಡಾದದ್ದು ಸೂರ್ವೆ ಗ್ರಾಮ. ಅಲ್ಲಿನ 39 ರೈತರಲ್ಲಿ 33 ರೈತರು ತಮ್ಮ ಆಸ್ತಿಯನ್ನು, ವಾಸರಕುದರ್ಗೆಯಲ್ಲಿ 20 ರೈತರು 74 ಸಾವಿರ ರೂಪಾಯಿ ಬೆಲೆ ಬಾಳುವ 146 ಎಕರೆ ಭೂಮಿಯನ್ನು ಕಳೆದುಕೊಂಡರು. ಪೋರ್-ಫಿಟ್ ಆದ ಭೂಮಿಯನ್ನು ಪಡೆದುಕೊಂಡ ಖದೀಮರು ಪೋಲಿಸ ಬಲದಿಂದ ಊರಿಗೆ ಬಂದು ಸಾಗುವಳಿ ಮಾಡಲು ಪ್ರಯತ್ನಿಸಿದರು. ಹೀಗಾಗಿ ಊರಿನಲ್ಲಿದ್ದವರ ಬದುಕೇ ದುಸ್ತರವಾಯಿತು.ಇದೇ ಕರನಿರಾಕರಣ ಚಳುವಳಿಯಲ್ಲಿ ಬಾರ್ಡೋಲಿಯ ಶ್ರೀಮಂತರು ರೈತರಿಗೆ ಕಷ್ಟ ಕಾಲದಲ್ಲಿ ನೆರವಾದರೆ ಅಂಕೋಲೆಯ ಶ್ರೀಮಂತರು ಕರುಣಾರಹಿತರಾಗಿ –“ಧಾರವಾಡದವರ ಮಾತು ಕೇಳಿ ಮೂರ್ಖತನ ಮಾಡಿದ್ದರ ಫಲ ಉಣ್ಣಿರಿ” ಎಂದು ಹಂಗಿಸಿದರು. ಇಂತಹ ದಾರುಣ ಪರಿಸ್ಥಿತಿಯಲ್ಲಿಯೂ ನಾಡವರು ಕೈ ಚಾಚದೆ ಧೀರತನದಿಂದ ಕರಬಂಧಿ ಮುಂದುವರೆಸಿದರು.

ಅದೇ ಕಾಲಕ್ಕೆ ಗಾಂಧಿಯವರು ಕರನಿರಾಕರಣ ಚಳುವಳಿಯನ್ನು ಹಿಂತೆಗೆದುಕೊಂಡರು. ಆಗ ಮಾತ್ರ ನಾಡವರ ರೈತರ ಧೈರ್ಯ ಕುಗ್ಗಿದ್ದು ನಿಜ. ಪೋರ್-ಫಿಟ್ ಆದ ಭೂಮಿಯನ್ನು ಪಡೆದುಕೊಂಡ ಧೂರ್ತರ ಹಿಗ್ಗಿದರು.ಏಕೆಂದರೆ ನಾಡವರ ಪ್ರಧಾನ ಕಸುಬು ವ್ಯವಸಾಯ. ಉತ್ತಲು ಭೂಮಿಯಿಲ್ಲ. ಉಣ್ಣಲು ಗತಿಯಿಲ್ಲ.

ಬೆಟ್ಟದ ಸೀಮೆಗೆ ಹೋಗಿ ಬಂಜರು ಭೂಮಿಯನ್ನು ಸಾಗುವಳಿ ಮಾಡುವಾ ಎಂದರೆ ಹೂಡಲು ಎತ್ತಿಲ್ಲ.ಬಿತ್ತಲು ಬೀಜವಿಲ್ಲ.ಕೊಳ್ಳಲು ಹಣವಿಲ್ಲ.ಮುಂದೇನು?ಕೆಲವರು ಹೆಂಡತಿಯ ಬಂಗಾರ ಮಾರಿದರು.ಕೆಲವರು ಬಂಧು-ಬಳಗದವರ ಮನೆಯಲ್ಲಿ ಕಾಲ ಕಳೆದರು. ಒಂದು ಕಾಲಕ್ಕೆ ಗೌರವದ ಜೀವನ ನಡೆಸುತ್ತಿದ್ದವರು ಹೆಂಡತಿ ಮಕ್ಕಳನ್ನು ಪಾಲಿಸಲು ಕೂಲಿನಾಲಿ ಮಾಡಿ ಜೀವನ ಸಾಗಿಸಬೇಕಾಯಿತು. ಇಷ್ಟೆಲ್ಲಾ ಕಷ್ಟ-ಕಿರುಕುಳವನ್ನು ಅನುಭವಿಸಿಯೂ ನಾಡವರ ದೇಶ ಪ್ರೇಮದಿಂದಾಗ ಅವರ ಸ್ವಾತಂತ್ರ್ಯ ದಾಹ ಆರಲಿಲ್ಲ. ಮುಂದಿಟ್ಟ ಹೆಜ್ಜೆ ಹಿಂದಿಡಲಿಲ್ಲ. ನಮ್ಮ ದೇಶ ಸ್ವಾತಂತ್ರ್ಯ ಪಡೆಯುವವರೆಗೂ ಬಿಟ್ಟು ಬಿಡದೆ ಹೋರಾಡಿದರು. ನಿಜಕ್ಕೂ ಅವರ ತ್ಯಾಗ ಮತ್ತು ಹೋರಾಟದ ಬದುಕು ಇಂದಿನ ಯುವ ಪೀಳಿಗೆಗೆ ಸ್ಫೂರ್ತಿಯಾಗಿದೆ.